ಆ) ಗೋವಾಳ ಜಮೀನಿನ ಉಸ್ತವಾರಿಯನ್ನು ಕೆ.ಎಂ.ಎಫ್. ಸಂಸ್ಥೆಗೆ ವಹಿಸಿ ಅಭಿವೃದ್ದಿಪಡಿಸುವ ಬಗ್ಗೆ ಯಾವುದೇ ಪ್ರಸ್ತಾವನೆ ಪಶುಸಂಗೋಪನಾ ಇಲಾಖೆಯಿಂದ ಬಂದಿರುವುದಿಲ್ಲ.

ಇ) "ಅ" ಮತ್ತು "ಆ" ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

758(815) ಶ್ರೀ ಕೃಷ್ಣ ಪಾಲೇಮಾರ್. ಜೆ(ಸುರತ್ಕಲ್) : ಮಾನ್ಯ ಪ್ರವಾಸೋದ್ಯಮ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಗುರುತಿಸಲ್ಪಟ್ಟ ಕಡಲ ತೀರಗಳ ಸಂಖ್ಯೆ ಎಷ್ಟು ;

ಆ) ಅನ್ವೇಷಣೆಗೆ ಒಳಪಡದ ಕಡಲ ತೀರಗಳು ಇನ್ನೂ ಉಳಿದಿವೆಯೇ ;

ಇ) ಕಡಲ ತೀರಗಳಿಗೆ ಮೂಲಭೂತ ಸಂಪರ್ಕ ರಸ್ತೆಗಳ ಸೌಲಭ್ಯಗಳನ್ನು ಒದಗಿಸಲು ಸರ್ಕಾರದ ಕಾರ್ಯ ಯೋಜನೆಗಳೇನು ;

ಈ) ಕಡಲ ತೀರಗಳ ಅಭಿವೃದ್ಧಿಗಾಗಿ ಆಯವ್ಯಯದಲ್ಲಿ ನಿಗಧಿಪಡಿಸಲಾದ ಮೊತ್ತ ಎಷ್ಟು:

ಶ್ರೀ ಡಿ.ಟಿ. ಜಯಕುಮಾರ್ (ಪ್ರವಾಸೋದ್ಯಮ ಸಚಿವರು):

ಅ) ಒಂಭತ್ತು(9)

ಆ) ಹೌದು

ಇ) ಪ್ರವಾಸಿ ಸ್ಥಳಗಳಲ್ಲಿ ಹೋಗುವ ಸಂಪರ್ಕ ರಸ್ತೆಗಳನ್ನು ಹುಡ್ಕೋ ಮೂಲಕ ಅಭಿವೃದ್ದಿ ಪಡಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಈ) ರೂ.25.00 ಲಕ್ಷ(ರೂಪಾಯಿ ಇಪ್ಪತ್ತೈದು ಲಕ್ಷಗಳು ಮಾತ್ರ)

760(1336) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನಾದ್ಯಂತ ಪರಿವರ್ತಕಗಳನ್ನು (ಟಿ.ಸಿ) ಹೆಚ್ಚುವರಿಯಾಗಿ ಅಳವಡಿಸಲು 1998 ರಲ್ಲಿ ಕಾರ್ಯಾದೇಶವಾಗಿದ್ದರೂ ಇಲ್ಲಿಯವರೆಗೆ ಕೇವಲ ಅರ್ಧದಷ್ಟು ಸಾಮಗ್ರಿಗಳನ್ನು ಮಾತ್ರ ಬಿಡುಗಡೆಗೊಳಿಸಿ, ಈಗ ಕಾಮಗಾರಿ ಪೂರ್ಣಗೊಳ್ಳುವ ಮೊದಲೇ ಬಾಕಿ ಸಾಮಗ್ರಿಗಳಿಗೆ ಬಜೆಟ್ ಕೇಳುತ್ತಿರುವುದು ಏಕೆ;

ಆ) ಸದರಿ ಸಾಮಗ್ರಿಗಳನ್ನು ಯಾವಾಗ ಬಿಡುಗಡೆಗೊಳಿಸಲಾಗುವುದು ಮತ್ತು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು ?

ಶ್ರೀ ಹೆಚ್.ಡಿ.ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ ಬರುವ ಚಿಕ್ಕಮಗಳೂರು ಜಿಲ್ಲೆತರೀಕೆರೆ ತಾಲ್ಲೂಕಿನಾದ್ಯಾಂತ ಹೆಚ್ಚುವರಿ ಪರಿವರ್ತಕಗಳನ್ನು (ಟಿ.ಸಿ) ಅಳವಡಿಸಲು 1998 ರಲ್ಲಿ ಕಾಯಾದೇಶವಾದ ಎಲ್ಲಾ ಕಾಮಗಾರಿಗಳು ಮುಕ್ತಾಯವಾಗಿರುತ್ತವೆ. ನಂತರದ ವರ್ಷಗಳಲ್ಲಿ ಮಂಜೂರಾದ ಕೆಲವು ಕಾಮಗಾರಿಗಳು ಪ್ರಗತಿಯಲ್ಲಿವೆ. ಅವುಗಳನ್ನು ಪೂರ್ಣಗೊಳಿಸಲು ಅಗತ್ಯ ಸಾಮಗ್ರಿಗಳ ಅವಶ್ಯಕತೆ ಇದೆ.

ಕಳೆದ ಮೂರು ವರ್ಷಗಳಲ್ಲಿ ಸತತ ಬರಗಾಲದಿಂದಾಗಿ ಸರಬರಾಜಾದ ಸಾಮಗ್ರಿ ಹೆಚ್ಚಿನ ಭಾಗವನ್ನು ಕುಡಿಯುವ ನೀರಿನ ಕಾಮಗಾರಿಗಳಿಗೆ ವಿನಿಯೋಗಿಸಿದ್ದರಿಂದ ಮೇಲಿನ ಕೆಲಸಗಳನ್ನು ಪೂರ್ಣಗೊಳಿಸಲಾಗಲಿಲ್ಲ. ಈ ಅವಧಿಯಲ್ಲಿ ಈ ತಾಲ್ಲೂಕಿನಲ್ಲಿ ಒಟ್ಟು 136 ಕುಡಿಯುವ ನೀರಿನ ಯೋಜನೆಗಳಿಗೆ ಸಂಪರ್ಕ ನೀಡಲಾಗಿದೆ.

ಆ) ಬೇಕಾಗಿರುವ ಸಾಮಗ್ರಿಗಳನ್ನು ಆದಷ್ಟು ಶೀಘ್ರರೀತಿಯಲ್ಲಿ ಪೂರೈಕೆ ಮಾಡಿ ಕೈಗೆತ್ತಿಕೊಳ್ಳಬೇಕಾಗಿರುವ ಕಾಮಗಾರಿಗಳನ್ನು ಕೈಗೊಂಡು ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.

761(728) ಶ್ರೀ ಕೃಷ್ಣಪ್ಪ ಎಂ.ಟಿ.(ತುರುವೇಕೆರೆ) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಇರುವ ಒಟ್ಟು ದೇವಸ್ಥಾನಗಳೆಷ್ಟು; ಆ ಪೈಕಿ ಮುಜರಾಯಿ ಇಲಾಖೆಗಳಿಗೆ ಒಳಪಟ್ಟಿರುವ ದೇವಸ್ಥನಗಳೆಷ್ಟು ;

ಆ) ಯಾವ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಕಳೆದ ಮೂರು ವರ್ಷಗಳಿಂದ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ;

ಇ) ಮುಜರಾಯಿ ಇಲಾಖೆಗೆ ಒಳಪಡದ ಎಲ್ಲಾ ದೇವಸ್ಥಾನಗಳನ್ನು ಇಲಾಖೆ ವ್ಯಾಪ್ತಿಗೆ ಸೇರಿಸಿಕೊಳ್ಳಲಾಗುವುದೆ ?

ಶ್ರೀ ಎಂ.ಪಿ.ಪ್ರಕಾಶ್(ಕಂದಾಯ ಸಚಿವರು) :

ಅ) ತುಮಕೂರು ಜಿಲ್ಲೆ, ತರುವೇಕೆರೆ ತಾಲ್ಲೂಕಿನಲ್ಲಿ ಧಾರ್ಮಿಕದತ್ತಿ ಇಲಾಖೆಯ ಆಡಳಿತಕ್ಕೊಳಪಟ್ಟು 415 ಅಧಿಸೂಚಿತ ಸಂಸ್ಥೆಗಳು ಇರುತ್ತವೆ. ಮುಜರಾಯಿ ಇಲಾಖೆಯ ಆಡಳಿತ ವ್ಯಾಪ್ತಿಗೆ ಬಾರದಿರುವ ಖಾಸಗಿ ದೇವಾಲಯಗಳ ಮಾಹಿತಿ ಇರುವುದಿಲ್ಲ.

ಆ) ಕಳೆದ 3 ವರ್ಷಗಳಲ್ಲಿ ದೇವಸ್ಥಾನಗಳ ದುರಸ್ಥಿ/ಜೀರ್ಣೋದ್ಧಾರ/ನಿರ್ಮಾಣಗಳಿಗೆ ತುರುವೇಕೆರೆ ತಾಲ್ಲೂಕಿಗೆ ಸರ್ಕಾರದಿಂದ ಮಂಜೂರಾದ ಅನುದಾನದ ವಿವರ ಕೆಳಕಂಡಂತೆ ಇರುತ್ತದೆ:-

2001–2002–10 ಸಂಸ್ಥೆಗಳು	ರೂ.1.50 ಲಕ್ಷಗಳು
2002–2003–6 ಸಂಸ್ಥೆಗಳು	ರೂ.1.75 ಲಕ್ಷಗಳು
2003–2004–3 ಸಂಸ್ಥೆಗಳು	ರೂ.0.65 ಲಕ್ಷಗಳು

ದೇವಾಲಯಗಳ ವಿವರ ಲಗತ್ತಿಸಿದೆ.

ಇ) ಇಲಾಖೆಯ ಆಡಳಿತ ವ್ಯಾಪ್ತಿಗೆ ಬಾರದಿರುವ ಖಾಸಗಿ ದೇವಾಲಯಗಳ ಆಡಳಿತ ನಿರ್ವಹಣೆ ಬಗ್ಗೆ ದೂರುಗಳು ಬಂದಲ್ಲಿ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ಕಾಯ್ದೆಯ ಸೆಕ್ಷನ್ 42ರ ಪ್ರಕಾರ ಗರಿಷ್ಟ 5 ವರ್ಷಗಳ ಅವಧಿಗೆ ಇಲಾಖೆಯ ಆಡಳಿತ ವ್ಯಾಪ್ತಿಗೆ ಸೇರಿಸಿಕೊಳ್ಳಲು ಅವಕಾಶ ಇರುತ್ತದೆ .